International Journal of Kannada Research 2024; 10(1): 101-104




International Journal of Kannada Research
www.kannadajournal.com

**ISSN: 2454–5813**
IJKR 2024; 10(1): 101-104
© 2024 IJKR
www.kannadajournal.com
Received: 06-12-2023
Accepted: 09-01-2024

**ಡಾ. ಮಹಾಂತಗೌಡ ಪಾಟೀಲ**
ಕನ್ನಡ ಸಹ ಪ್ರಾಧ್ಯಾಪಕರು,
ದೇವನಾಂಪ್ರಿಯ ಅಶೋಕ
ಸರ್ಕಾರಿ ಪ್ರಥಮ ದರ್ಜೆ,
ಕಾಲೇಜು, ಮಸ್ಕಿ, ರಾಯಚೂರು
ಜಿಲ್ಲೆ, ಕರ್ನಾಟಕ, ಭಾರತ

**Corresponding Author:**
**ಡಾ. ಮಹಾಂತಗೌಡ ಪಾಟೀಲ**
ಕನ್ನಡ ಸಹ ಪ್ರಾಧ್ಯಾಪಕರು,
ದೇವನಾಂಪ್ರಿಯ ಅಶೋಕ
ಸರ್ಕಾರಿ ಪ್ರಥಮ ದರ್ಜೆ,
ಕಾಲೇಜು, ಮಸ್ಕಿ, ರಾಯಚೂರು
ಜಿಲ್ಲೆ, ಕರ್ನಾಟಕ, ಭಾರತ

# ಬಸವಣ್ಣನವರ ಜಾತ್ಯಾತೀತ ಸಮಾಜದ ಚಿಂತನೆ

**ಡಾ. ಮಹಾಂತಗೌಡ ಪಾಟೀಲ**

**DOI:** https://doi.org/10.22271/24545813.2024.v10.i1b.945

**ಪೀಠಿಕೆ**

ಸಾಮಾಜಿಕ ನ್ಯಾಯದ ನೆಲೆಗಟ್ಟಿನ ಮೇಲೆ ಸಮಾಜ ಪರಿವರ್ತಿಸುವ ಕನಸು ಕಂಡ, ರಾಜಾಶ್ರಯವನ್ನು ತೊರೆದು, ವಿಶ್ವವೇ ಕುಟುಂಬ ಎಂಬ ಪರಿಕಲ್ಪನೆಯಲ್ಲಿ ನಡೆದ ಭಾರತದ ಮೊಟ್ಟಮೊದಲ ಜನತಾ ಚಳುವಳಿಯೇ ಹನ್ನೆರಡನೇ ಶತಮಾನದ ಬಸವಾದಿ ಪ್ರಮಥರ ಚಳುವಳಿ. ಶರಣರ ಮಹಾಕ್ರಾಂತಿಯು ಸಾಮಾಜಿಕ–ಸಾಹಿತ್ಯಿಕ ಹೋರಾಟ ರೂಪಿಸಿದ ಹನ್ನೆರಡನೇ ಶತಮಾನದ ವಚನ ಪರಂಪರೆ ಸರ್ವಕಾಲಿಕ ಸತ್ವದ ತವನಿಧಿ.

ಹನ್ನೆರಡನೇ ಶತಮಾನದ ಶರಣರು ಜಾತಿವ್ಯವಸ್ಥೆಯ ವಿರುದ್ಧ ಜಾತಿ ವಿನಾಶ ಚಳುವಳಿಯನ್ನು ಕೈಗೊಂಡರು. ಈ ದೇಶದಲ್ಲಿ ನಡೆದ ಮುಂದಿನ ಚಳುವಳಿಗೆ ಪ್ರೇರಣೆಯಾಯಿತು. ಎಂಟುನೂರು ವರ್ಷಗಳ ಹಿಂದೆ ನಡೆದ ಶರಣರ ಚಳುವಳಿಯು ಗಾಂಧೀ, ಅಂಬೇಡ್ಕರ್ ಹಾಗೂ ಲೋಹಿಯಾ ಮುಂತಾದ ಜನಪರ ಹಾಗೂ ಜೀವಪರ ಚಳುವಳಿಯ ನಾಯಕರು ಬಸವಾದಿ ಶರಣರ ಚಳುವಳಿಯಿಂದ ಸ್ಪೂರ್ತಿಯನ್ನು ಪಡೆದರು.

ಬಸವಣ್ಣನವರ ನೇತೃತ್ವದಲ್ಲಿ ಆರಂಭವಾದ ಸಾಮಾಜೀಕ–ಧಾರ್ಮಿಕ ಹೋರಾಟದಲ್ಲಿ ಕಡೆಗಣಿಸಲ್ಪಟ್ಟ ಶೂದ್ರರು, ಪಂಚಮರು, ದುಡಿಯುವ ಶ್ರಮೀಕ ವರ್ಗ ಹಾಗೂ ಮಹಿಳೆಯರು ಮೊಟ್ಟಮೊದಲ ಭಾರಿಗೆ ಸಕ್ರೀಯವಾಗಿ ಭಾಗವಹಿಸಿದ ಕಾರಣದಿಂದ ಹನ್ನೆರಡನೇ ಶತಮಾನದ ಶರಣರ ಆಂದೋಲನ ಚರಿತ್ರೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಶೋಷಿತರ, ದುಡಿಯುವ, ತಳಸಮುದಾಯದ ನಾಯಕರಾಗಿ ಬಸವಣ್ಣನವರು ಜಾತಿ ವಿನಾಶ–ಅಸ್ಪೃಶ್ಯತೆ, ಅಸಮಾನತೆ, ಲಿಂಗ–ತಾರತಮ್ಯ ಮುಂತಾದ ಮೂಡನಂಬಿಕೆಗಳನ್ನು ತಮ್ಮ ವಚನಗಳ ಮೂಲಕ ಕಂಡಾ ತುಂಡವಾಗಿ ವಿರೋಧಿಸಿದರು. ಈ ಮೂಲಕವಾಗಿ ಸಮಾಜದಲ್ಲಿದ್ದ ಜಾತಿವ್ಯವಸ್ಥೆ, ಮೂಡನಂಬಿಕೆ, ಅಂಧಶ್ರದ್ಧೆ, ಕಂದಾಚಾರಗಳನ್ನು ಕಿತ್ತೊಗೆದರು.

ಬಸವಾದಿ ಶರಣರು ಮುಖ್ಯವಾಗಿ ವಿರೋಧಿಸಿದ್ದು ಹಿಂದೂ ಧರ್ಮದ ಜಾತಿ–ಶ್ರೇಣೀಕರಣ ವ್ಯವಸ್ಥೆಯನ್ನು. "ಸರ್ವಜನ ಸುಖಿನೋಭವಂತು; ಸರ್ವಂ ಖಲದಂ ಬ್ರಹ್ಮಾ" ಎಂಬ ಹುಸಿ ಸುಳ್ಳುಗಳಿಂದ ಜಗತ್ತನ್ನು ಮೊಸಗೊಳಿಸಿತ್ತು. ತನ್ನೊಳಗೆ ಚಾತುರವರ್ಣ ಪದ್ಧತಿಯನ್ನು ಬಲವಾಗಿ ಸಮರ್ಥಿಸುತ್ತಾ ಅಂತಹ ಅಮಾನವೀಯ ಕ್ರೂರ ಕೃತ್ಯಗಳನ್ನು ಉಳಿಸಿಕೊಂಡು ಬಂದ ಹಿಂದೂ ಧರ್ಮದ ಕುತಂತ್ರವನ್ನು ಬಸವಣ್ಣ ಹಾಗೂ ಶಿವಶರಣರು ಅತ್ಯಂತ ತೀವ್ರವಾಗಿ ಪ್ರತಿಭಟಿಸಿದರು. ಇಂತಹ ಮತಾಚರಣೆಯನ್ನು ಬುದ್ಧನ ನಂತರ ಬಸವಾದಿ ಶಿವಶರಣರು ಜಾತಿ ವ್ಯವಸ್ಥೆಯನ್ನು ವಿರೋಧಿಸಿ ಹೋರಾಟವನ್ನು ಆರಂಭಿಸಿದರು.

ಬಸವಾದಿ ಶಿವಶರಣರು ಪರಂಪರಾಗತವಾಗಿ ಬಂದ ವರ್ಣವ್ಯವಸ್ಥೆಯನ್ನು ಬುಡಸಮೇತವಾಗಿ ಕಿತ್ತಿಹಾಕಿ ವರ್ಣಸಂಕರ ಸಂಸ್ಕೃತಿಯ ಮೂಲಕ ಸಾಮಾಜಿಕ ಸಮಾನತೆಯ ಪರಿಕಲ್ಪನೆಯಲ್ಲಿ ನವಸಮಾಜವನ್ನು ನಿರ್ಮಾಣಮಾಡಿತು. "ಕುಲವನರಸುವರೇ ಶರಣರಲ್ಲಿ ವರ್ಣಸಂಕರವಾದ ಬಳಿಕ" ಎಂದು ಬಸವಣ್ಣನವರು ಪ್ರಶ್ನೆಯನ್ನು ಮಾಡುತ್ತಾರೆ. ಜಾತಿ ಶ್ರೇಣೀಕರಣವನ್ನು ಮುರಿದು ಸಮಾನತೆಯನ್ನು ನೆಲೆಗೊಳಿಸಿದರು.

ಶಿವಶರಣರು ಅಂದಿನ ಕಾಲದ ಸಾಮಾಜಿಕ ಪರಸ್ಥಿತಿಗೆ ತೀವ್ರವಾಗಿ ಸ್ಪಂದಿಸಿ ಲೋಕಾನುಭವ ಪಡೆದು ಲೋಕರೂಡಿಯನ್ನು ತಪ್ಪಿಸಿ ಹೊಸ ಸಾಮಾಜಿಕ ವ್ಯವಸ್ಥೆಯನ್ನು ರೂಡಿಸಿ ವಿಶ್ವವೇ ಒಂದು ಕುಟುಂಬ,

ಈ ಕುಟುಂಬದಲ್ಲಿ ನಾವೆಲ್ಲರೂ ಒಂದೇ ಎಂದು ಜೀವಪರವಾದ ಚಿಂತನೆಯನ್ನು ನಡೆಸಿದವರು ಬಸವಣ್ಣನವರು. ಅಂಗದ ಮೇಲಿನ ಲಿಂಗವುಳ್ಳವರನ್ನೆಲ್ಲ ಒಂದು ಸಮಾನವೇದಿಕೆಗೆ ತಂದು ಅವರವರ ಮೊದಲಿನ ಕುಲಜಾತಿಗಳನ್ನು ಅಳಿಸಿ ಹಾಕಿದರು. ಜ್ಯಾತ್ಯಾತೀತ ಹಾಗೂ ಸಮಾಜವಾದದ ಪರಿಕಲ್ಪನೆಯಲ್ಲಿ ಶರಣರ ಚಳುವಳಿ ಮುನ್ನಡೆಯಿತು.

**ಜ್ಯಾತ್ಯಾತೀತ– ಸಮಾಜದ ಚಿಂತನೆ**

ಭಾರತೀಯ ಸಮಾಜದಲ್ಲಿ ಜಾತಿ–ಮತ ಪಂಥಗಳ ಭೇದ–ಭಾವಗಳು ಸಾವಿರಾರು ವರ್ಷಗಳಿಂದಲೂ ತಲೆದೊರಿದಂತ ಅತ್ಯಂತ ಅಮಾನವೀಯ, ನಿಷ್ಕೃಷ್ಟ ಪದ್ದತಿ. ಮೇಲು–ಕೀಳು, ಬಡವ–ಬಲ್ಲಿದ, ಗಂಡು–ಹೆಣ್ಣು, ಜಾತಿಬೇದ ಮುಂತಾದ ಕ್ರೂರ ಕೃತ್ಯಗಳನ್ನು ಕಿತ್ತಿಹಾಕಲು ಶಿವಶರಣರು ಬಸವಣ್ಣನವರ ನೇತೃತ್ವದಲ್ಲಿ ಅವಿಶ್ರಾಂತ ಪರಿಶ್ರಮಿಸಿದರು. ವರ್ಣಾಶ್ರಮಗಳಿಂದ ಏನೂ ಪ್ರಯೋಜನವಿಲ್ಲವೆಂದು ಸಾರಿದವರು ಬಸವಾದಿ ಪ್ರಮಥರು.

ನಿಜವಾದ ಶರಣರಿಗೆ ಕುಲವಿರಕೂಡದು ಎಂದು ಬಸವಣ್ಣನವರು ವಚನಸಾಹಿತ್ಯದ ಮೂಲಕ ಸಮಾಜ ಸುಧಾರಣೆ ಮಾಡಿದರು. ಜಾತಿ–ಸಮಾಜಗಳಲ್ಲಿ ಅಡಗಿರುವ ಕಂದಕಗಳನ್ನು–ಕಂದಾಚಾರಗಳನ್ನು ಹೊಗಲಾಡಿಸಲು ಅನೇಕ ವಚನಗಳನ್ನು ರಚಿಸಿದ್ದಾರೆ.ಸಮಾಜದಲ್ಲಿ ತುಂಬಿ ತುಳುಕುತ್ತಿರುವ ಕಂದಾಚಾರ, ಮೂಡನಂಬಿಕೆಗಳು, ಜಾತಿವ್ಯವಸ್ಥೆಯ ವಿರುದ್ಧ ಚಿಂತಿಸಲು–ಚರ್ಚಿಸಲು ಬಸವಕಲ್ಯಾಣದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿದ್ದರು. ಬಸವಣ್ಣನವರು ಸ್ಥಾಪಿಸಿದ ಅನುಭವಮಂಟಪವನ್ನು ಭಾರತದ ಮೊದಲ ಜನಸಾಮಾನ್ಯರ ಸಂಸತ್ತು ಎಂದೂ ಕರೆಯಲಾಗುತ್ತದೆ. ಅನುಭವಮಂಟಪದ ಶೂನ್ಯಸಿಂಹಾಸನದ ಅಧ್ಯಕ್ಷತೆಯನ್ನು ಮಹಾಜ್ಞಾನಿ ಅಲ್ಲಮಪ್ರಭುಗಳು ವಹಿಸಿದ್ದರು. ಅವರ ನೇತೃತ್ವದಲ್ಲಿ ಸರ್ವಕುಲದ ಶಿವಶರಣರು ಭಾಗವಹಿಸಿ ಸಮ ಸಮಾಜದ ಚಿಂತನೆಯನ್ನು ಮಾಡಿದ ಜೀವಂತ ಸಾಕ್ಷಿಯಾಗಿದೆ.

ಜ್ಯಾತ್ಯಾತೀತ ಹಾಗೂ ಸಮಾಜದ ಕುರಿತಾದ ಬಸವಣ್ಣನವರ ವಚನಗಳನ್ನು ಈ ಕೆಳಗಿನಂತೆ ಅವಲೋಕಿಸಬಹುದು.

ಕೊಲ್ಲುವವನೇ ಮಾದಿಗ; ಹೊಲಸು ತಿಂಬುವವನೇ ಹೊಲೆಯ
ಕುಲವೇನೋ ಆವಂದಿರ ಕುಲವೇನೋ
ಸಕಲಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲ ಸಂಗನ ಶರಣರೆಲ್ಲ ಕುಲಜರು.

ಎಂದು ಬಸವಣ್ಣನವರು ಘಂಟಾಘೋಷವಾಗಿ ಸಾರಿದರು. ಹೊಲೆಯ–ಮಾದಿಗ ಎನ್ನುವುದು ಜಾತಿಯಲ್ಲ; ಅದು ಪ್ರತಿಯೊಂದು ಕೋಮಿಗೂ ಅಂಟಿಕೊಂಡು ಬಂದಿರುವ ರೋಗ, ಶಾಪವೆಂದೂ ಅವರವರ ಸ್ವಭಾವ ದೋಷದಿಂದಾಗಿ ಈ ರೋಗ ತಟ್ಟುವುದೇ ಹೊರತು, ಹುಟ್ಟು ಇಲ್ಲವೇ ಅವರು ಕೈಗೊಂಡ ವೃತ್ತಿಯಿಂದಲ್ಲ. ಹಿಂಸೆಯ, ಹೊಲಸಿನ ಮನೋಭಾವ ಹಾಗೂ ನಡವಳಿಕೆಯಿಂದ ಒಬ್ಬ ಕೀಳಾಗುತ್ತಾನೆಯೇ ಹೊರತು ಅವನ ಹುಟ್ಟಿನಿಂದ ಅಲ್ಲ. ಈ ವಚನವು ಪರಂಪರಾಗತವಾದ ಜಾತಿಯ ಕಲ್ಪನೆಯನ್ನು ವಿರೋಧಿಸುತ್ತದೆ. ಸಂಕ್ರಮಣ ಕಾಲದ ಸಮಾಜದಲ್ಲಿನ ಮೇಲು–ಕೀಳುಗಳನ್ನು ಉಗ್ರವಾಗಿ ಖಂಡಿಸಿದವರು ಬಸವಣ್ಣನವರು.

ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ
ಜಲವೊಂದೇ ಶೌಚಾಚಮನಕ್ಕೆ
ಕುಲವೊಂದೇ ಷಡುದರುಶನ ಮುಕ್ತಿಗೆ
ನಿಲುವೊಂದೇ ಕೂಡಲ ಸಂಗಮದೇವಾ ನಿಮ್ಮನರಿದವಂಗೆ

ಎಂದು ಸಾರಿದವರು ಬಸವಣ್ಣನವರು. ಲೋಕದಲ್ಲಿ ಹುಟ್ಟಿದ ಮಾನವರಿಗೆಲ್ಲಾ ನೆಲ, ಜಲ, ಗಾಳಿ,ಫಲ, ಪುಷ್ಪಗಳೂ ಎಲ್ಲವೂ ಒಂದೇ ಸಮನಾಗಿರುತ್ತವೆ. ಆದರೆ ಮನುಷ್ಯ ಮನುಷ್ಯರಲ್ಲಿಯೇ ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯ ಎಂಬ ಭೇದಭಾವ ಕಂದಕಗಳು ನಿರ್ಮಿಸಿದ್ದಾನೆ. ಕಾಯಕ ಮುಖ್ಯವೇ ಹೊರತು ಅವನ ಜಾತಿಯಲ್ಲ ಎಂಬ ಅಂಶವನ್ನು ಬಸವಣ್ಣನವರು ಪ್ರತಿಪಾದಿಸಿದ್ದಾರೆ.

ಕಾಸಿಕಮ್ಮಾರನಾದ ಬೀಸಿ ಮಡಿವಾಳನಾದ
ಹಾಸವನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸುವರುಂಟೇ? ಜಗದೊಳಗೆ !
ಲಿಂಗಸ್ಥಲವನರಿದವನೇ ಕುಲಜನು

ಎಂದು ಬಸವಣ್ಣನವರು ಮರ್ತ್ಯಲೋಕದ ಜನರಿಗೆ ತಿಳಿಹೇಳಿದ್ದಾರೆ. ದೇವರು–ಧರ್ಮದ ಕುರಿತು ಬಸವಣ್ಣನವರು ಪ್ರಗತಿಪರವಾದ ಚಿಂತನೆಯನ್ನೇ ಮಾಡಿದ್ದಾರೆ. ಜಾತಿ ಪದ್ದತಿಯ ಮೂಲವನ್ನು ವಸ್ತುನಿಷ್ಠವಾಗಿ ಗ್ರಹಿಸಿದ ಬಸವಣ್ಣ ಅದರ ಪೊಳ್ಳುತನವನ್ನು ಮೇಲೀನ ವಚನದಲ್ಲಿ ಬಯಲಿಗೆಳೆದಿದ್ದಾರೆ. ಸಾಮಾಜಿಕ ವ್ಯವಸ್ಥೆಯಲ್ಲಿ ಮತ–ವ್ಯಕ್ತಿ–ಲಿಂಗ ಬೇದಗಳೆಲ್ಲಾ ಅಳಿದು ಶಿವಭಕ್ತಿ ಸಾಧನೆಯೊಂದೇ ತಳಹದಿಯಂದು ಬಸವಣ್ಣನವರು ಪ್ರತಿಪಾದಿಸಿದ್ದಾರೆ. ಹೀಗೆ ಬಸವಣ್ಣನವರ ಸಾಮಾಜಿಕ ಪ್ರಜ್ಞೆಯೂ ಸಮಾಜ ಸುಧಾರಕರ ಪ್ರಕರವಾದ ಮನಸ್ಸಿನಂತಹದ್ದಾಗಿದೆ. ತನ್ನ ಸಮಾಜದ ಓರೆ–ಕೋರೆಗಳನ್ನು ತಿದ್ದುವುದರ ಮೂಲಕ ಇತರರಿಗೂ ತಿಳಿಹೇಳುವ ಕೆಲಸವನ್ನು ಮಾಡಿದ್ದಾರೆ.

ಜಾತಿವಿನಾಶ ಮಾಡುವುದಲ್ಲದೇ ಸ್ತ್ರೀ–ಸಮಾನತೆ, ಅಂತರಂಗ–ಬಹಿರಂಗ ಶುದ್ಧಿ, ಕಾಯಕ ನಿಷ್ಠೆ, ವರ್ಗಪ್ರಜ್ಞೆಯನ್ನು ಸಾರಿದ ಬಸವಾದಿ ಶರಣರು ಜನಪರ ಕಾಳಜಿಯನ್ನು ಮತ್ತು ಮಾನವ ಪ್ರೀತಿಯನ್ನು ತೋರಿದ್ದಾರೆ. ಬಸವಣ್ಣನವರ ಜ್ಯಾತ್ಯಾತೀತ ಪರಿಕಲ್ಪನೆ ಬಹುಮುಖ್ಯವಾದದ್ದಾಗಿದೆ. ಜಾತಿವಿನಾಶದ ಕುರಿತಾದ ವಚನಗಳನ್ನು ಗಮನಿಸಬಹುದು.

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವನೆಂದೆನಿಸಯ್ಯ
ಕೂಡಲಸಂಗಮದೇವ
ನಿಮ್ಮ ಮನೆಯ ಮಗನೆಂದೆನಿಸಯ್ಯ

ಮೇಲ್ವರ್ಗದವರು ಕೆಳವರ್ಗದವರನ್ನು ಕೀಳಾಗಿ ಕಾಣುತ್ತಿದ್ದರು. ಮಹಾಮಾನವತಾವಾದಿ ಬಸವಣ್ಣನವರು ಮಾನವ ಸಮುದಾಯವನ್ನು ಸಮಾನ ಪ್ರೀತಿ–ಗೌರವಗಳಿಂದ ಕಾಣುವ ಮನಸ್ಸಿನವರಾಗಿದ್ದರು. ಜಾತಿವ್ಯವಸ್ಥೆಯನ್ನು ಕಟುವಾಗಿ ಖಂಡಿಸಿದ್ದಾರೆ. ಎಲ್ಲರೂ ಸಮಾನರೂ ಎಲ್ಲಜನರೂ ನಮ್ಮವರೇ ಎಂಬ ಸಮಾನತೆ–ಸಹೋದರತೆ ಭಾವನೆ ಬಸವಣ್ಣನವರದು. "ಮಾನವ ಕುಲಂ ತಾನೊಂದೇ ವಲಂ" ಎಂಬ ಮಹಾಕವಿ ಪಂಪನಂತೆ ಬಸವಣ್ಣನವರು ಮಾನವಕುಲದಲ್ಲಿ ಜನಿಸಿದವರೆಲ್ಲರೂ ಒಂದೇ ಎಂಬ ಧೋರಣೆಯನ್ನು ಹೊಂದಿದ್ದರು. ಮೇಲು–ಕೀಳು ಕಿತ್ತೊಗೆದು ಜಾತಿವ್ಯವಸ್ಥೆಯನ್ನು ಬುಡಸಮೇತ ಕಿತ್ತೊಗೆಯುವ ಕಾರ್ಯದಲ್ಲಿ ಬಸವಣ್ಣನವರು ಯಶಸ್ವಿಯಾದರು. ಜೀವನದುದ್ದಕ್ಕೂ ಜಾತಿ ವ್ಯವಸ್ಥೆಯನ್ನು ವಿರೋಧಿಸಿಯೇ ಬದುಕಿದವರು ಬಸವಣ್ಣನವರು. ಹೀಗೆ ಜಾತಿ ನಿರಾಕರಣೆ ಹಾಗೂ ಜಾತಿವಿನಾಶ ಪರಿಕಲ್ಪನೆಯನ್ನು ಕಾಣಬಹುದಾಗಿದೆ. ಅದಕ್ಕಾಗಿಯೇ ನಿಜವಾದ ಧರ್ಮ–ಕುಲಯಾವುದು ಎಂದು ತಮ್ಮ ವಚನದಲ್ಲಿ ಸ್ಪಷ್ಟಪಡಿಸುತ್ತಾರೆ.

ದಯವಿಲ್ಲದ ಧರ್ಮವದಾವುದಯ್ಯ?
ದಯಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ
ದಯವೇ ಧರ್ಮದ ಮೂಲವಯ್ಯ
ಕೂಡಲ ಸಂಗಯ್ಯನಲ್ಲದೊಲ್ಲನಯ್ಯ.

ಬಸವಣ್ಣನವರು ದಯಾ ಕರುಣೆ-ಮಾನವೀಯತೆ-ಅನುಕಂಪ ಮುಂತಾದ ಮಾನವೀಯ ಮೌಲ್ಯಗಳಿಗೆ ಪ್ರಾದಾನ್ಯತೆಕೊಡದಿರುವ ದರ್ಮವು ಧರ್ಮವೇ ಅಲ್ಲ. ದಯವೇ ಸಕಲರೆಲ್ಲರಲ್ಲಿ ಪ್ರಮುಖವಾಗಿರಬೇಕು. ಅಹಿಂಸೆಯೇ ಪರಮ ಧರ್ಮವಾಗಬೇಕು ಎಂದು ಕ್ರೂರತೆ ಹಿಂಸೆಯನ್ನು ಕಿತ್ತಿಹಾಕುವಲ್ಲಿ ಶ್ರಮಿಸಿದರು. ಇಂತಹ ಅನೇಕ ಅಂಶಗಳೇ ಮುಂದೇ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರಿಗೆ ಅಹಿಂಸೆಯೇ ಅವರ ಹೋರಾಟದ ಅಸ್ತ್ರಗಳಾದವು.

ಅಪ್ಪನು ನಮ್ಮ ಮಾದಾರ ಚೆನ್ನಯ್ಯ
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ
ಚಿಕ್ಕಯ್ಯ ನಮ್ಮಯ್ಯ ಕಾಣಯ್ಯ
ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ
ಎನ್ನನೇತಕ್ಕರಿಯರಿ ಕೂಡಲಸಂಗಯ್ಯ

ಎಂದೂ ಜಾತಿ-ಕುಲ-ಬೇದಗಳಿಂದ ಮುಕ್ತವಾದ ಸರ್ವಸಮಾನತೆಯ ಧೋರಣೆಯನ್ನು ಬಸವಣ್ಣನವರು ಹೊಂದಿದ್ದರು. ಸರ್ವೋದಯ ಪರಿಕಲ್ಪನೆಯ ನವಸಮಾಜವನ್ನು ಕಟ್ಟುವ ಸ್ಪಷ್ಟ ನಿಲುವನ್ನು ಬಸವಣ್ಣನವರು ಹೊಂದಿದ್ದರು. ಅದಕ್ಕಾಗಿಯೇ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಕಿನ್ನರಿ ಬೊಮ್ಮಯ್ಯ ಮೊದಲಾದ ಕೆಳವರ್ಗದ ಶರಣರನ್ನು ಆತ್ಮೀಯವಾಗಿ ಗೌರವಿಸಿದ್ದಾರೆ. ಬಸವಣ್ಣನಿಗೆ ಉಚ್ಚ-ನೀಚ ಭಾವನೆಗಳನ್ನು ಸೃಷ್ಟಿಸಿ ಸಮಾಜವನ್ನು ಚೂರಾಗಿ ಮಾಡಿದ ಜಾತಿ ವ್ಯವಸ್ಥೆಯನ್ನು ಬುಡಸಮೇತವಾಗಿ ಕಿತ್ತಿಹಾಕುವುದು ಮುಖ್ಯವಾಗಿತ್ತು. ಆದ್ದರಿಂದಲೇ ಬಸವಣ್ಣನವರು ಸ್ವಜಾತಿ ನಿರಾಕರಣೆ ಮಾಡಿ, ತನ್ನನ್ನು ಕೆಳವರ್ಗದವರಲ್ಲಿ ಗುರುತಿಸಿಕೊಳ್ಳುವುದರ ಮೂಲಕ ಸಾಮಾಜಿಕ ಸಮಾನತೆಗೆ ದಿಟ್ಟ ಹೋರಾಟ ನಡೆಸಿದರು.

ವ್ಯಾಸ ಭೋವಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ
ಮಂಡೋಧರಿ ಕಪ್ಪೆಯ ಮಗಳು, ಕುಲವನರಸದಿರಿ ಭೋ !

ಚನ್ನಯ್ಯನ ಮನೆಯ ದಾಸನ ಮಗ
ಕಕ್ಕಯ್ಯನ ಮನೆಯ ದಾಸನ ಮಗಳು
ಇವರಿಬ್ಬರೂ ಹೊಲದಲು ಬೆರಣಿಗೆ ಹೋಗಿ, ಸಂಗಮಾಡಿದರು
ಇಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವ ಸಾಕ್ಷಿಯಾಗಿ

ಹೀಗೆ ಅನೇಕ ವಚನಗಳಲ್ಲಿ ಬಸವಣ್ಣನವರು ವರ್ಣ-ವರ್ಗಬೇದ-ಲಿಂಗತಾರತಮ್ಯವನ್ನು ವಿರೋಧಿಸುವ ಗುಣಗಳನ್ನು, ಸಂದೇಶಗಳನ್ನು ಕಾಣುತ್ತೇವೆ. ನಾವು ನಮ್ಮವರು ಎಂಬ ಭಾವನೆಯಲ್ಲಿ ಎಲ್ಲರೂ ಒಂದೇ ಎಂಬ ಆಶಯವನ್ನು ಕಾಣುತ್ತೇವೆ. ಜಾತಿ ನಿರಾಕರಣೆಯ ಸೂಚಕವಾಗಿ ಈ ಮೇಲಿನ ವಚನಗಳನ್ನು ಕಾಣುವ ಅವಶ್ಯಕತೆಯಿದೆ. ಬಸವಣ್ಣನವರ ಜ್ಯಾತ್ಯಾತೀತ ಮನೋಭಾವದ ದೊಡ್ಡ ವ್ಯಕ್ತಿತ್ವವನ್ನು ಇಲ್ಲಿ ನಿಚ್ಚಳವಾಗಿ ಕಾಣಬಹುದಾಗಿದೆ." ಮೇಲುಜಾತಿಯವರು ಕೆಳಜಾತಿಯವರನ್ನು ಕೀಳಾಗಿ ಕಾಣುತ್ತಿದ್ದರ ಕಾರಣದಿಂದಾಗಿ ಬಸವಣ್ಣ ಈ ರೀತಿಯಾಗಿ ತನ್ನ ಜಾತಿ ಶ್ರೇಷ್ಠತೆಯನ್ನು ನಿರಾಕರಿಸುವುದರ ಮೂಲಕವಾಗಿ ಜಾತಿಯನ್ನಾಚರಿಸುವವರಿಗೆ ಉತ್ತರವನ್ನು ನೀಡಿದ್ದಾರೆ.

ವ್ಯಕ್ತಿಗಳನ್ನು ಜಾತಿಗಳ ಆಧಾರದ ಮೇಲೆ ಬೆಲೆ ಕಟ್ಟುವುದು ಸರಿಯಲ್ಲ.ಅವರ ಸಾಧನೆ,ಸಿದ್ಧಿ, ಪ್ರತಿಭೆ,ಪಾಂಡಿತ್ಯಗಳನ್ನು ಜಾತಿಯ ಆಧಾರದ ಮೇಲೆ ಬೆಲೆ ಕಟ್ಟುವುದು ಸರಿಯಲ್ಲ ಎಂಬ ವಿಚಾರವನ್ನು ಬಸವಣ್ಣನವರು ಜೀವನದುದ್ದಕ್ಕೂ ಹೊಂದಿದ್ದರು.

ಬಸವಣ್ಣ ಮತ್ತು ಸಮಕಾಲೀನ ಶರಣರು ಜಾತ್ಯಾತೀತವಾದ, ಮತಾತೀತವಾದ ಸರ್ವಸಮಾನತೆಯ ವಿಶಾಲ ಮನೋಭಾವದ ನವಸಮಾಜವೊಂದನ್ನು ಕಟ್ಟಲು ಪ್ರಾಮಾಣಿಕ ಪ್ರಯತ್ನ ಮಾಡಿದರು. ಅಪ್ಪಟ ಮಾನವ ಸಮಾಜ-ಸಂಸ್ಕೃತಿಯನ್ನು ಕಟ್ಟಲು ಬಸವಣ್ಣನವರು ಮತ್ತು ಶರಣರು ಪ್ರಾಮಾಣಿಕವಾಗಿ ಶ್ರಮಿಸಿದರು.

ಶರಣರು ರೂಪಿಸಿದ ಆದರ್ಶ ಸಮಾಜದಲ್ಲಿ ಅಸ್ಪೃಶ್ಯತೆ ಇರಲಿಲ್ಲ. ಹರಳಯ್ಯ-ಮದುವರಸರ ಮಗ-ಮಗಳ ವಿವಾಹವನ್ನು ಬಸವಾದಿ ಶಿವಶರಣರು ನೆರವೇರಿಸಿದರು. "ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯ" ಎಂದು ಹಾಡಿ ಹರಿಸಿದರು. ಅಂಗದ ಮೇಲೆ ಲಿಂಗವಿದ್ದವರೆಲ್ಲರನ್ನು ಸಂಗಮನಾಥ ಎಂದು ಕಾಣುವ ಬಸವಣ್ಣನವರು ಉದಾತ್ತ ತತ್ವ ಆಚರಣೆಗಳನ್ನು ಭಾರತೀಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಕೆತ್ತಿಸುವಂತಹವು.

"ಸಂಪ್ರದಾಯಸ್ಥ ಬ್ರಾಹ್ಮಣವಾದಿ ಸಿದ್ಧಾಂತಕ್ಕೆ ವಿರುದ್ಧವಾಗಿ ಬೆಳೆದ ಈ ಚಳುವಳಿ ಮೂರ್ತಿಪೂಜೆಯನ್ನು ಹಾಗೂ ಜಾತಿ ಆಧಾರಿತ ಸಮಾಜವನ್ನು ಖಂಡಿಸಿತು. ವೀರಶೈವ ಚಳುವಳಿಯ ಹುಟ್ಟಿನಿಂದ ಜಾತಿಯ ವ್ಯತ್ಯಾಸಗಳನ್ನು ತಿರಸ್ಕರಿಸುತ್ತಾ ಬ್ರಾತೃತ್ವವನ್ನು ತಿರಸ್ಕರಿಸಿತ್ತೋ ಅದೇ ತರಹದ ಹುಟ್ಟು ಹಾಗೂ ಶುದ್ಧಿಯ ಆಧಾರದ ಮೇಲೆ ಸಾಮಾಜಿಕ ಪ್ರತ್ಯೇಕತೆಯನ್ನು ಬೆಳಸಿಕೊಂಡಿತು. (ಆರ್.ಎನ್.ನಂದಿ (ಲೇ) ವೀರಶೈವ ಚಳುವಳಿಯ ಹುಟ್ಟು: ಬಸವಣ್ಣನ ವಚನಗಳು ಸಾಮಾಜಿಕ ಮುಖಾಮುಖಿ-ಪುಟ-17)

ಸಮಾಜದಲ್ಲಿ ತೊಳಲಾಡುತ್ತಿದ್ದ ಅನ್ಯಾಯ, ಮೇಲು-ಕೀಳು, ಶ್ರೀಮಂತ-ಬಡವ, ಹೆಣ್ಣು-ಗಂಡು ಎಂಬ ಬೇದಭಾವಗಳನ್ನು ತೆಗೆದುಹಾಕಿ ಸಮಾನತೆಯ ಹೊಸ ಸಮಾಜವನ್ನು ನಿರ್ಮಿಸಲು ಶ್ರಮಿಸಿದರು. ಎಲ್ಲರೂ ಸಹೋದರತೆಯಿಂದ ಪ್ರೀತಿ,ವಿಶ್ವಾಸ ಸ್ನೇಹಪೂರ್ವಕ ಸಹಕಾರದಿಂದ ಬದುಕಬೇಕು ಎಂಬ ಸಂದೇಶವನ್ನು ಬಸವಾದಿ ಶರಣರ ಚಳುವಳಿ ಎತ್ತಿತೋರಿಸುತ್ತದೆ.

ಒಟ್ಟಿನಲ್ಲಿ ತಮ್ಮ ಬದುಕಿನುದ್ದಕ್ಕೂ ಹೋರಾಟದ ಅಸ್ತ್ರದ ಮೂಲಕ ಧಾರ್ಮಿಕ-ಸಾಮಾಜಿಕ ಆಂದೋಲನವನ್ನು ಬಸವಣ್ಣನವರು ಮುನ್ನಡೆಸಿದರು. ರಾಜತ್ವವನ್ನು ವಿರೋಧಿಸಿಯೇ ಜನಮಾನಸದಲ್ಲಿ ನೆಲೆಯೂರಿದರು. ಅನುಭವಮಂಟಪದ ಮೂಲಕ ಸಾಮಾಜಿಕ ಚಳುವಳಿಗೆ ಶಕ್ತಿ ತುಂಬಿದರು. ತಳವರ್ಗದ ಶರಣರಿಗೆ, ಮಹಿಳೆಯರಿಗೂ ಸಮಾನಾವಕಾಶವನ್ನು ಕಲ್ಪಿಸುವುದರ ಮೂಲಕ ಜಾತ್ಯಾತೀತ ಸಂಕರಕ ಸಂಸ್ಕೃತಿಗೆ ನಾಂದಿ ಹಾಡಿದ ಮೊಟ್ಟಮೊದಲ ಜಾತ್ಯಾತೀತ ನಾಯಕ ಮಹಾನ್ ಮಾನವತಾವಾದಿ ಜಗಜ್ಯೋತಿ ಬಸವಣ್ಣನವರು. "ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ" ಎನ್ನುವುದರ ಮೂಲಕ ತನ್ನ ವ್ಯಕ್ತಿತ್ವವನ್ನು ತುಳುಕದಂತೆ ಪ್ರದರ್ಶಿಸಿದ ಮಹಾನ್ ಸಮಾಜ ಚಿಂತಕರು. ಹಿಂದೂ ಧರ್ಮದ ಕಂದಾಚಾರ-ಮೂಡನಂಬಿಕೆಗಳ ಆಗರವಾಗಿತ್ತು. ಪ್ರಗತಿವಿರೋಧಿ ಧೋರಣೆಯನ್ನು ಹೊಂದಿತ್ತು. ಆ ಕಾರಣಕ್ಕಾಗಿ ಮೂರ್ತಿಪೂಜೆಯನ್ನು ವಿರೋಧಿಸಿದರು. ವರ್ಣಸಂಕರವನ್ನು ಪ್ರಮುಕ ಗುರಿಯಾಗಿರಿಸಿಕೊಂಡು ತಮ್ಮ ಹೋರಾಟವನ್ನು ಜಾತಿ ಪದ್ದತಿಯ ವಿರುದ್ಧ ಹೋರಾಡಿ ಮಾನವೀಯ ಮೌಲ್ಯಗಳ ಆಗರವಾದ ಸಮಸಮಾಜದ ಜಾತ್ಯಾತೀತ ಚಲನಶೀಲ ಸಮಾಜದ ನಿರ್ಮಾಣವನ್ನು ಮಾಡಿದವರು ಬಸವಾದಿ ಶಿವಶರಣರು.

**ಆಕರಗ್ರಂಥಗಳು**


1. ಶಿವಶರಣರ ಲೋಕನೀತಿ– ಡಾ.ಸಂಗಮೇಶ ಸವದತ್ತಿ ಮಠ.
2. ವಚನ ಸಂಪದ (ಸಂ) ಡಾ.ಎಂ.ಎಸ್.ಲಠ್ಠೆ
3. ಬಸವಣ್ಣ: (ಸಂ) ಡಾ.ವಿ.ಜಿ.ಪೂಜಾರ
4. ಶರಣರು ಕಂಡ ಬಸವಣ್ಣ ಃ ಎಚ್.ಪಿ.ಚಂದನಗೌಡ
5. ಜಾಗತೀಕ ಚಿಂತಕರು ಮತ್ತು ಬಸವಣ್ಣ (ಸಂ) ಡಾ.ಎಚ್.ಟಿ.ಪೋತೆ
6. ಪ್ರಥಮ ವಚನಕಾರ ಜೇಡರದಾಸಿಮಯ್ಯ ಃ ಎಚ್.ಎಸ್.ಬೇನಾಳ